ದಿಃ **24.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರಿದ ಮುಖ್ಯ ವಿಚಾರಣೆ**:** ವಾದಿ ಪರ ಶ್ರೀ ಎನ್ ಬಿ ಪಿ ಆರ್ ವಕೀಲರಿಂದ

ದಿನಾಂಕ 11.03.2016 ರ ಮಾರಾಟದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಶಾನೆಯನ್ನು ಗುರುತಿಸಲು ಪ್ರತಿವಾದಿ 8 ರಿಂದ 11 ರ ಪರ ವಕೀಲರು ಅದು ನೊಂದಾಯಿತ ದಾಖಲಾತಿಯಾಗಿರುವುದಿಲ್ಲ ಎಂಬ ಕಾರಣದಿಂದ ಆಕ್ಷೇಪ ವ್ಯಕ್ತಪಡಿಸಿದ್ದು ಅವರ ಆಕ್ಷೇಪಕ್ಕೆ ಒಳಪಟ್ಟು ಅದನ್ನು ನಿಪಿ-**7** ರಂತೆ ಗುರುತಿಸಲಾಯಿತು.

ಮೂಲ ಸ್ವಾಧೀನತಹ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**8** ರಂತೆ ಗುರುತಿಸಲಾಯಿತು.

ದಿನಾಂಕ 18.03.2016 ರ ಮೂಲ ನೊಂದಾಯಿತ ರಿಲೀಸ್ ಡೀಡ್ ನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**9** ರಂತೆ ಗುರುತಿಸಲಾಯಿತು.

ಪ್ರತಿವಾದಿ 1 ರಿಂದ 3 ರವರು ಬರೆದುಕೊಟ್ಟ ಪ್ರತ್ಯೇಕ ಮೂರು ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಿಪಿ-**10** ರಿಂದ ನಿಪಿ-**12** ಎಂದು ಗುರುತಿಸಲಾಯಿತು.

1ನೇ ಪ್ರತಿವಾದಿಯು 7ನೇ ಪ್ರತಿವಾದಿ ಬ್ಯಾಂಕಿನಿಂದ ಅವರಿಗೆ ಕಳುಹಿಸಿದ ಒಂದು ಪತ್ರವನ್ನು ನನಗೆ ಕೊಟ್ಟಿದ್ದು ಅದನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**13** ರಂತೆ ಗುರುತಿಸಲಾಯಿತು.

ದಿನಾಂಕ 03.09.2016 ರ ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**14** ರಂತೆ ಗುರುತಿಸಲಾಯಿತು.

ದಿನಾಂಕ 03.09.2016 ರ ಪತ್ರಕ್ಕೆ ಎಂಸಿಸಿ ಬ್ಯಾಂಕ್ ನವರು ಪ್ರತ್ಯುತ್ತರದ ಟ್ರೂ ಕಾಫಿಯನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**15** ರಂತೆ ಗುರುತಿಸಲಾಯಿತು.

ಕರ್ಣಾಟಕ ಬ್ಯಾಂಕ್ ನವರು 6ನೇ ಪ್ರತಿವಾದಿಗೆ ಕಳುಹಿಸಿದ ಪತ್ರದ ಟ್ರೂ ಕಾಫಿಯನ್ನು ಹಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**16** ರಂತೆ ಗುರುತಿಸಲಾಯಿತು.

ನಾನು ವಕೀಲರ ಮೂಲಕ ದಿನಾಂಕ 25.10.2017 ರಂದು ಪುತ್ತೂರು ಸಿಟಿ ಮುನ್ಸಿಪಾಲಿಟಿಗೆ, ತಹಶೀಲ್ದಾರರಿಗೆ ಹಾಗೂ ಗ್ರಾಮ ಲೆಕ್ಕಾಧಿಕಾರಿಗೆ ನೀಡಿದ ನೋಟಿಸಿನ ವಕೀಲರ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಿಪಿ-**17** ರಿಂದ ನಿಪಿ-**19** ರಂತೆ ಗುರುತಿಸಲಾಯಿತು.

ನಾನು ಉಪವಿಭಾಗಧಿಕಾರಿ ಹಾಗೂ ಪುತ್ತೂರು ನಗರ ಸಭೆ ಪೌರ ಆಯುಕ್ತರಿಗೆ ದಿನಾಂಕ 03.11.2017 ರಂದು ನೀಡಿದ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಿಪಿ-**20** ಮತ್ತು ನಿಪಿ-**21** ರಂತೆ ಗುರುತಿಸಲಾಯಿತು.

ಜಿಲ್ಲಾಧಿಕಾರಿಯವರಿಗೆ ನಾನು ನೀಡಿದ ಎರಡು ಪತ್ರಗಳ ಪ್ರತಿಯನ್ನು ಹಾಗೂ ಯೋಜನ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಇವರಿಗೆ ನೀಡಿದ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಿಪಿ-**22** ರಿಂದ ನಿಪಿ-**24** ರಂತೆ ಗುರುತಿಸಲಾಯಿತು.

ದಿನಾಂಕ 08.11.2017 ರಂದು ನಾನು ಪೌರ ಆಯುಕ್ತರಿಗೆ ನೀಡಿದ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**25** ರಂತೆ ಗುರುತಿಸಲಾಯಿತು.

ದಿನಾಂಕ 09.11.2017 ರಂದು ನಿರ್ದೇಶಕರು ಪೌರ ಆಡಳಿತ ನಿರ್ದೇಶನಾಲಯ ಇವರಿಗೆ ನೀಡಿದ ಪತ್ರವನ್ನು ಪೌರ ಆಯುಕ್ತರು ಪುತ್ತೂರು ನಗರ ಸಭೆ ಇವರಿಗೆ ನೀಡಿದ ಕುರಿತು ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**26** ರಂತೆ ಗುರುತಿಸಲಾಯಿತು.

ನಾನು ದಾವ ಸ್ವತ್ತಿನಲ್ಲಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ನಾಲ್ಕು bill of supply ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ಒಟ್ಟಿಗೆ ನಿಪಿ-**27** ರಂತೆ ಗುರುತಿಸಲಾಯಿತು.

ಒಂದನೇ ವಾದಿ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಮೂರು account statement ನ್ನು ಹಾಜರುಪಡಿಸಿದ್ದು ಅವುಗನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಿಪಿ-**28** ರಿಂದ ನಿಪಿ-**30** ರಂತೆ ಗುರುತಿಸಲಾಯಿತು.

ನನ್ನ ಖಾತೆಗೆ ಸಂಬಂಧಪಟ್ಟ statement of account ನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**31** ರಂತೆ ಗುರುತಿಸಲಾಯಿತು.

ಒಂದನೇ ವಾದಿಯ ಕಂಪನಿಗೆ ಸೇರಿದ ಬ್ಯಾಂಕ್ account statement ನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**32** ರಂತೆ ಗುರುತಿಸಲಾಯಿತು.

ಒಂದನೇ ಪ್ರತಿವಾದಿಯ ಸಾಲದ ಖಾತೆಗೆ ಸಂಬಂಧಪಟ್ಟಂತೆ ಏಳು ಲೋನ್ account statement ನ್ನು ಹಾಜರುಪಡಿಸಿದ್ದು ಅವುಗನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಿಪಿ-**33** ರಿಂದ ನಿಪಿ-**39** ರಂತೆ ಗುರುತಿಸಲಾಯಿತು.

ಮೂರನೇ ಪ್ರತಿವಾದಿಯ ಗಂಡನ ಸಾಲದ ಖಾತೆಯ ಎರಡು account statement ನ್ನು ಹಾಜರುಪಡಿಸಿದ್ದು ಅವುಗನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ನಿಪಿ-**40** ಮತ್ತು ನಿಪಿ-**41** ರಂತೆ ಗುರುತಿಸಲಾಯಿತು.

ಹೋಟೆಲ್ ವ್ಯಾಲಂಕಣಿ ಸಂಬಂಧಿಸಿದ account statement ನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**42** ರಂತೆ ಗುರುತಿಸಲಾಯಿತು.

ದಿನಾಂಕ 10.10.2016 ರ ಒಂದು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**43** ರಂತೆ ಗುರುತಿಸಲಾಯಿತು.

ಪೋಲಿಸರು ಕೊಟ್ಟ ಒಂದು ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ನಿಪಿ-**44** ರಂತೆ ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯವಕಾಶ ಕೋರುತ್ತಿದ್ದು ನ್ಯಾಯಾಲಯದ ಮಧ್ಯಾಹ್ನದ ಕಲಾವಧಿಯು ಮುಗಿದಿದ್ದರಿಂದ ಕೋರಿಕೆಯನ್ನು ಪುರಸ್ಕರಿಸಿ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.